ಓಎಸ್ 217/2022

**ಪಿ.ಡಬ್ಲ್ಯೂ: 01**

ದಿನಾಂಕಃ 29.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲು ಪ್ರತಿವಾದಿ ಪರ ಶ್ರೀ ಕೆ ಎನ್ ವಕೀಲರಿಂದಃ**

ನನ್ನ ತಂದೆಗೆ 3 ಜನ ಮಕ್ಕಳು. ಅವರುಗಳೆಂದರೆ ನಾನು, 2 ನೇ ವಾದಿ ಮತ್ತು ಇನ್ನೊಬ್ಬ ಸಹೋದರಿ ತೀರಿಕೊಂಡಿದ್ದಾರೆ. ಈ ಬಗ್ಗೆ ನನ್ನ ವಾದಪತ್ರದಲ್ಲಿ ನಮೂದು ಮಾಡಿರುವುದಿಲ್ಲ. ಅವಶ್ಯಕತೆ ಇರಲಿಲ್ಲ ಆದ್ದರಿಂದ ನಮೂದು ಮಾಡಿಸಿರುವುದಿಲ್ಲ. ಪ್ರತಿವಾದಿಗಳು ನಮ್ಮ ಹೆಸರಿಗೆ ಕ್ರಯದ ಕರಾರುಪತ್ರವನ್ನು ಮಾಡಿಕೊಟ್ಟಿರುತ್ತಾರೆ ನಂತರ ಕ್ರಯ ಮಾಡಿಕೊಡಲು ಕೇಳಿದಾಗ ಮಾಡಿಕೊಟ್ಟಿರುವುದಿಲ್ಲ, ಆದ ಕಾರಣ ಪರಿಹಾರವನ್ನು ಕೋರಿ ಈ ದಾವೆಯನ್ನು ಹೂಡಿರುತ್ತೇನೆ. ಪ್ರಮಾಣಪತ್ರವನ್ನು ನನ್ನ ವಕೀಲರು ಅವರ ಕಛೇರಿಯಲ್ಲಿ ತಯಾರಿಸಿದ್ದಾರೆ. ಪ್ರಮಾಣಪತ್ರದಲ್ಲಿ ನಮೂದಾಗಿರುವ ವಿಚಾರವನ್ನು ತಿಳಿದುಕೊಂಡಿರುತ್ತೇನೆ. ಪ್ರತಿವಾದಿಗಳು ಹಾಗೂ ನನ್ನ ತಂದೆಯ ನಡುವೆ ಆದ ವ್ಯವಾಹರದ ಮಾಹಿತಿ ನನಗೆ ಇಲ್ಲ ಎಂದರೆ ಸರಿಯಲ್ಲ. ನಿಪಿ1 ರಲ್ಲಿ ನನ್ನ ತಂದೆ ಸಹಿ ಇರುತ್ತದೆ, ನಾನು ಸಹಿ ಹಾಕಿರುವುದಿಲ್ಲ. ನಿಪಿ1 ಬರೆಯುವ ಸಮಯದಲ್ಲಿ ನಾನು ನನ್ನ ತಂದೆಯೊಂದಿಗೆ ಇದ್ದೆ, ಆದರೆ ನಾನು ಸಹಿ ಹಾಕಿರುವುದಿಲ್ಲ. ನಾನು ನನ್ನ ತಂದೆಯೊಂದಿಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ನಿಪಿ1 ನ್ನು ಉಪನೊಂದಣಾಧಿಕಾರಿ ಕಛೇರಿಯಲ್ಲಿ ತಯಾರಾಗಿರುತ್ತದೆ. ನಿಪಿ1 ನ್ನು ಯಾರು ಬರೆಸಿರುತ್ತಾರೆಂದು ನನಗೆ ಗೊತ್ತಿಲ್ಲ ಹಾಗೂ ಮಾಹಿತಿಯನ್ನು ಯಾರು ನೀಡಿರುತ್ತಾರೆಂದು ನನಗೆ ಗೊತ್ತಿಲ್ಲ. ನಿಪಿ1 ನ್ನು 2014 ನೇ ಇಸವಿಯಲ್ಲಿ ಆಗಿರುತ್ತದೆ ದಿನಾಂಕ, ತಿಂಗಳು ನೆನಪಿಲ್ಲ. ನಾನು ನನ್ನ ತಂದೆಯೊಂದಿಗೆ ಉಪನೊಂದಣಾಧಿಕಾರಿ ಕಛೇರಿಗೆ ಹೋಗಿದ್ದರೆ ದಿನಾಂಕ, ತಿಂಗಳು ನಿಖರವಾಗಿ ಹೇಳುತ್ತಿದ್ದೆ ಹಾಗೂ ಯಾರು ಮಾಹಿತಿ ನೀಡಿದ್ದರು ಎಂದು ಹೇಳುತ್ತಿದ್ದೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು ನನ್ನ ತಂದೆಯ ಬಳಿ ಹಣದ ಅವಶ್ಯಕತೆ ಇರುವ ಬಗ್ಗೆ ಹೇಳಿ ಕ್ರಯದ ಕರಾರುಪತ್ರ ಮಾಡಿಕೊಟ್ಟಿರುತ್ತಾರೆ, ಆಗ 4 ಲಕ್ಷಕ್ಕೆ ಒಪ್ಪಂದವಾಗಿರುತ್ತದೆ, ಮೊದಲಿಗೆ ಒಂದೂವರೆ ಲಕ್ಷ ನೀಡಿ ನಂತರ ಎರಡೂವರೆ ಲಕ್ಷವನ್ನು ನೀಡಿರುತ್ತಾರೆ. ಪ್ರತಿವಾದಿಗಳು ಆಗಸ್ಟ್ 2014 ರಂದು ಹಣವನ್ನು ಕೇಳಿಕೊಂಡು

ಬಂದಿದ್ದರು, ಅದೇ ದಿನದಂದು ನಾವು ಒಂದೂವರೆ ಲಕ್ಷವನ್ನು ನನ್ನ ತಂದೆ ನೀಡಿದ್ದರು, ಪುನಃ 2015 ರಲ್ಲಿ ಎರಡೂವರೆ ಲಕ್ಷ ನೀಡಿರುತ್ತಾರೆ. ಪ್ರತಿವಾದಿಗಳು ಹಣವನ್ನು ಕೇಳಿಕೊಂಡು ನಿಪಿ1 ನ್ನು ಬರೆಯುವ ಮುಂಚೆ ಬಂದಿದ್ದರು, ಯಾವ ದಿನಾಂಕದಂದು ಬಂದಿದ್ದರು ಎಂದು ನಿಖರವಾಗಿ ಗೊತ್ತಿಲ್ಲ. ಯಾರೊಂದಿಗೆ ಬಂದಿದ್ದರು ಎಂದು ಗೊತ್ತಿಲ್ಲ. ನಿಪಿ1 ನ್ನು ಬರೆಯುವ ಸಮಯದಲ್ಲಿ ಒಂದೂವರೆ ಲಕ್ಷ ರೂ.ಗಳನ್ನು ನೀಡಿದ್ದರು. ಒಂದೂವರೆ ಲಕ್ಷಗಳನ್ನು ಯಾವ ರೀತಿ ನೀಡಿದ್ದರು ಎಂದು ನೆನಪಿಲ್ಲ, ಹಣವನ್ನು ನೀಡಿದ್ದರು. ಪ್ರತಿವಾದಿಗಳು ನಿಪಿ1 ಕ್ಕೆ ಸಹಿ ಹಾಕಿರುತ್ತಾರೆ.

ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು. ನನ್ನ ತಂದೆಗೆ ಕನ್ನಡ ಓದಲು ಬರುತ್ತಿತ್ತು. ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದಪತ್ರವನ್ನು ಓದಿತಿಳಿದುಕೊಂಡಿರುತ್ತೇನೆ. ಪ್ರತಿವಾದಿಗಳು ಎಅವಿದ್ಯಾವಂತರು ಎಂದರೆ ಗೊತ್ತಿಲ್ಲ. ನನ್ನ ತಂದೆ ಓದಿಕೊಂಡಿದ್ದರು ಹಾಗೂ ಎಲ್ಲಾ ವಿಚಾರಗಳನ್ನು ತಿಳಿದುಕೊಂಡಿದ್ದರು, ಪ್ರತಿವಾದಿಗಳು ಅವಿದ್ಯಾವಂತರಾದ ಕಾರಣ ಅವರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾಖಲಾತಿ ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಮಯಾವಕಾಶ ನೀಡಿ ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಒಂದನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು.